ಚಿದಾನಂದ, ಜವನಗೊಂಡನಹಳ್ಳಿ

ಅಮಾವಾಸ್ಯೆ, ಹುಣ್ಣಿಮೆ ಇರದಿದ್ದರೆ ಜ್ಯೋತಿಷಿಗಳ ಭವಿಷ್ಯ ಏನಾಗುತ್ತದೆ?



ರಾಹು–ಕೇತು, ಶನಿ ಇವೆಯಲ್ಲ! ನರ–ಗ್ರಹಕ್ಕೆ ಸುರಗ್ರಹಗಳ ಕೊರತೆಯೇನಿಲ್ಲ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಕೊರೊನಾ ನಾಲ್ಕನೆಯ ಅಲೆ ಬರತ್ತೋ ಅಥವಾ ಬರಿ ‘ಬೆಸ್ಟ್ ಆಫ್ ತ್ರೀ’ ಅಷ್ಟೇನೋ?

ನಲವತ್ತನೆಯದೂ ಬಂದೀತು. ಹೊಣೆ ಹೊರುವುದು ಕಡಿಮೆಯಾದಷ್ಟೂ ಹೆಣ ಹೊರುವುದು ಹೆಚ್ಚುತ್ತದೆ.

ಬಿ.ಆರ್. ಉಷಾ, ಬೆಂಗಳೂರು

ಚೆನ್ನಾಗಿರುವ ದೋಸೆಗಳನ್ನೆಲ್ಲಾ ತಾನು ತಿಂದು ಮಿಕ್ಕಿದ್ದನ್ನು ಗಂಡನಿಗೆ ಕೊಡುವ ಹೆಂಗಸರಿಗೆ ಏನು ಮಾಡಬೇಕು?

ಶುದ್ಧ ಮಂತ್ರಿಬುದ್ಧಿ ತೋರಿಸುವುದರಿಂದ ‘ಗೃಹಮಂತ್ರಿ’ ಎಂದು ಬೈಯುವುದೇ ಸರಿ.

ಅನಸೂಯ ಟಿ, ಕೇದಿಗೆಮನೆ

ನಿಯತ್ತಿಲ್ಲದ ನಾಯಿಗಳು ಇವೆಯೇ?

ನಾಯಿಗಳು ಮಾಲೀಕರನ್ನು ಅನುಸರಿಸುತ್ತವೆ. ಪಕ್ಷಾಂತರಿಗಳ ನಾಯಿಗಳು...



ರಾಜೇಶ್ವರಿ, ಪುತ್ತೂರು

ಅಹಂಕಾರದ ಕೊಡಕ್ಕೆ ತೂತು ಬೀಳೋದು ಯಾವಾಗ ರಾಮ್?

ಉದಾಸೀನದ ಮೊನೆ ತಗುಲಿದಾಗ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ದೋಸೆಯನ್ನು ಚೂರು ಮಾಡಿಕೊಂಡೇ ತಿನ್ನುವುದು. ಆದರೆ ಚೂರುಚೂರಾದ ದೋಸೆ ಕೊಟ್ಟರೆ ಕೋಪವೇಕೆ?

2 ಕಾರಣಗಳು– ದೋಸೆ ಚಿಂದಿಯಾಗಿಸುವುದು ಅವರ ಈಜನ್ಮಸಿದ್ಧ ಹಕ್ಕು; ತನ್ನಂತೆ ಪರರು ಬಗೆಯರು.

ಪಿ.ಜೆ. ರಾಘವೇಂದ್ರ, ಮೈಸೂರು

ರಾಮ ರಾಮಾ... ವೈನ್ ಸ್ಟೋರು ಬಾರೂ ಅಗತ್ಯ ಸೇವೆಯೇ?

(ಹಣದ) ಚೀಲಗಳನ್ನು, ಚೇಲಾಗಳನ್ನು ತುಂಬಿಕೊಳ್ಳಲು ಅದು ಅತ್ಯಗತ್ಯವಂತೆ.

ಅಶೋಕ ಆರ್. ಹಾಲಣ್ಣನವರ, ಲಕ್ಷ್ಮೇಶ್ವರ

ಹಣೆಗೆ ಹಚ್ಚೆ ಹಾಕಿಸದ ಹೆಣ್ಣು ಈಗ ಮೈತುಂಬಾ ಟ್ಯಾಟೂ ಹಾಕಿಸಿಕೊಳ್ಳುತ್ತಿದ್ದಾರಲ್ಲಾ ಏಕೆ?

ಸಮಯದ ಅಭಾವದಿಂದ ಟೆಂಪೊರರಿ ಮೆಹಂದಿಗಿಂತ ಪರ್ಮನೆಂಟಾದ ‘ಹಚ್ಚೇ ದಿನ್’ ಸೂಕ್ತವಂತೆ.

ಪಿ. ಜಯವಂತ ಪೈ, ಕುಂದಾಪುರ

ತಣ್ಣೀರಿಗೂ, ಕಣ್ಣೀರಿಗೂ ವ್ಯತ್ಯಾಸವೇನು?

ತಣ್ಣೀರು ಬಾವಿಜಲ; ಕಣ್ಣೀರು ಭಾವಜಲ.

ಹೆಚ್.ವಿ. ರಂಗನಾಥ, ಬೆಂಗಳೂರು

ಮಹಿಳೆಯರು ಎಲ್ಲಾ ವಿಭಾಗದಲ್ಲೂ ಮುಂದುವರೆದಿದ್ದರೂ ಪುರುಷಪ್ರಧಾನ ಸಮಾಜ ಎಂದು ದೂರುವರಲ್ಲಾ...?

ದೈಹಿಕ/ಮಾನಸಿಕ/ಲೈಂಗಿಕ ದೌರ್ಜನ್ಯಗಳಲ್ಲಿ ಪುರುಷ ತನ್ನ ಮುಂದಾಳತ್ವವನ್ನು ಇನ್ನೂ ಬಿಟ್ಟುಕೊಟ್ಟಿಲ್ಲವಲ್ಲ!

ಜಯಶ್ರೀ, ಬೆಂಗಳೂರು

ನಿಜ ಜೀವನದ ಅತ್ತೆ ಸೊಸೆಗೂ ಧಾರಾವಾಹಿಯ ಅತ್ತೆ ಸೊಸೆಗೂ ವ್ಯತ್ಯಾಸವೇನು?

ಧಾರಾವಾಹಿಯ ಅತ್ತೆಸೊಸೆಗೆ ವಿಷ, ಭೂಗತಲೋಕ ಸುಲಭವಾಗಿ ಕೈಗೆಟುಕುತ್ತದೆ.

ಹರಿತಸ, ಬೆಂಗಳೂರು

ಆತ್ಮಚರಿತ್ರೆಯಲ್ಲಿ ಪ್ರಾಮಾಣಿಕತೆ ಇದೆಯೆ?

ಮಾಣಿ ಇರುತ್ತಾನೆ, ಕತೆ ಇರುತ್ತದೆ. ಆತ್ಮವಂಚನೆಯೂ ಧಾಳಾಗಿ ಇರುತ್ತದೆ.

ಮಲ್ಲಿಕಾರ್ಜುನ, ಸುರಧೇನುಪುರ

ಗಿರಿಯಲ್ಲಿದ್ದರೂ ಸರಿ, ಗುಲಾಮಗಿರಿ ಸರಿಯಲ್ಲ ಅಂತಿದ್ದಾನಲ್ಲ ಇಲ್ಲೊಬ್ಬ ಗುಲಾಮ...?

ಹಾಗಾದರೆ ದಾದಾಗಿರಿಯವರಿಂದ ದೂರವಾ–ಗಿರಿ ಎನ್ನಿರಿ.

## ಬಹುಮಾನಿತ ಪ್ರಶ್ನೆ

ಮಂಜುಳಾ ನಾರಾಯಣರಾವ್, ಊರಿಲ್ಲ

ಎರಡನೇ ಹೆಂಡತಿಗೆ ಸವತಿ ಎನ್ನುತ್ತಾರೆ. ಎರಡನೇ ಗಂಡನಿಗೆ ಏನೆನ್ನಬೇಕು?

ಸಪತಿ.

ರಾಜಶೇಖರ ಹಾದಿಮನಿ, ಧಾರವಾಡ

ಮಹಿಳೆಯರನ್ನು, ಬಡವರನ್ನು ಹಿಂಸಿಸುವವರನ್ನು ಹೆಡೆಮುರಿಗೆ ಕಟ್ಟಿ ಸಮುದ್ರಕ್ಕೆಸೆಯುವ ಜನನಾಯಕ ಎಲ್ಲಿದ್ದಾನೆ?

ರಜನಿಕಾಂತರ ಹಳೆಯ ಪಿಕ್ಚರ್‌ಗಳಲ್ಲಿ.

ದೇವೇಂದ್ರ, ಕಡೂರು

ವ್ಯಕ್ತಿಯ ವ್ಯಕ್ತಿತ್ವಕ್ಕಿಂತ ಹಣಕ್ಕೆ ಬೆಲೆ ಜಾಸ್ತಿ ಅಲ್ವೆ ಸಾರ್?

ಹಾಗಿದ್ದರೆ ನಿಮ್ಮ ಹಿರಿಯರನ್ನು ಎಷ್ಟು ಹಣ ಬಂದರೆ ಮಾರುತ್ತೀರಿ?

ಮಂಡಿ ಕುಮಾರ್, ಬೆಂಗಳೂರು

ದಿನವೂ ಜಗಳವಾಡುವ ದಂಪತಿಗಳಲ್ಲಿ ಪ್ರೀತಿ ಹೆಚ್ಚು ಅಂತಾರೆ. ನಿಜವೇ ರಾಮ್?



ನಿಜ ಸ್ವಪ್ರೀತಿ.

ಪಿ.ಜೆ. ರಾಘವೇಂದ್ರ, ಮೈಸೂರು

ನಮ್ಮ ಪ್ರಶ್ನೆಗಳಿಗೆ ಉತ್ತರಿಸುವ ನಿಮ್ಮನ್ನು ‘ಉತ್ತರಮುಖಿ’ ಎನ್ನಬಹುದೆ?

ಅಂಕಣಕ್ಕೆ ಸಂಭಾವನೆ ಇರುವುದರಿಂದ ಸುಧಾ ‘ದಕ್ಷಿಣೆಮುಖಿ’ ಎನ್ನುತ್ತಾಳೆ ಪ್ರಶ್ನಮುಖಿಗಳೆ!

ಟಿ.ಎಂ. ಮಾನಪ್ಪ, ಶಿವಮೊಗ್ಗ

ದೇಶದಲ್ಲಿ ಕ್ಷೌರಿಕ, ಅಗಸ, ಟೈಲರ್, ರೈತ ಇಲ್ಲದಿದ್ದರೆ ಹೇಗಿರುತ್ತಿತ್ತು?

ನಾಗರಿಕತೆಯ ಕೃತಕತೆ ಇಲ್ಲದ ಕೃತಯುಗದಂತೆ ಸೊಂಪಾಗಿ ಇರುತ್ತಿತ್ತು.

ವಿ. ಹೇಮಂತಕುಮಾರ್, ಬೆಂಗಳೂರು

ಕನ್ನಡ ನ್ಯೂಸ್ ಚಾನಲ್‌ಗಳಿಗೂ, ಕನ್ನಡ ಧಾರಾವಾಹಿಗಳಿಗೂ ವ್ಯತ್ಯಾಸವೇನು?

ಒಂದು ಬೊಗಳೆದಾಸ, ಇನ್ನೊಂದು ರಗಳೆದಾಸ.

■ **ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**